**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

**ಸಿ.ಸಿ.ನಂ.6402/2021**

| | | |
|---|---|---|
| ಪಿರ್ಯಾದಿ | ವಿರುದ್ಧ | ಆರೋಪಿಗಳು |
| ಸರ್ಕಾರದ ವತಿಯಿಂದ ಪೇಪರ್ ಟೌನ್ ಪೋಲೀಸ್ ಠಾಣೆ, ಭದ್ರಾವತಿ. | | 1) ಪ್ರವೀಣ ಕುಮಾರ್ ಜೆ.<br>2) ಜಯರಾಮ್<br>3) ಶ್ರೀಮತಿ ಶಾರದಮ್ಮ<br>4) ಪ್ರದೀಪಕುಮಾರ್ |

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರ ಅನ್ವಯ ಆರೋಪಿಯ ಹೇಳಿಕೆಃ**

ಪ್ರಶ್ನೆ.1- ಇದುವರೆಗೂ ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಸಾಕ್ಷ್ಯವನ್ನು ನೀವು ಕೇಳಿ ಅರ್ಥಮಾಡಿಕೊಂಡಿರುವಿರಾ ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.2- ಪ್ರಾ.ಸಾ.1 ಧನಲಕ್ಷ್ಮಿ, ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ 09.06.2019 ರಂದು ಭದ್ರಾವತಿಯ ಜನ್ನಾಪುರದ ಮಲ್ಲೇಶ್ವರ ಸಭಾ ಭವನದಲ್ಲಿ 1 ನೇ ಆರೋಪಿಯವರೊಂದಿಗೆ ತನ್ನ ಮದುವೆ ಆಗಿದ್ದು, ವರೋಪಚಾರದ ರೂಪದಲ್ಲಿ ಬಂಗಾರದ ಸರ, ಒಡವೆಗಳು ಹಾಗೂ ರೂ.3 ಲಕ್ಷ ಹಣವನ್ನು ನಗದು ರೂಪದಲ್ಲಿ ಕೊಡಲಾಗಿದ್ದು ಮತ್ತು ತನ್ನ ತವರು ಮನೆಯಿಂದ ಅಂದಾಜು 150 ಗ್ರಾಂ ಬಂಗಾರವನ್ನು ತನಗೆ ಮದುವೆ ಕಾಲಕ್ಕೆ ಕೊಟ್ಟಿದ್ದು ಮತ್ತು ಮದುವೆ ನಂತರ ನನ್ನನ್ನು ಕೆ. ದಾಸಾಪುರದ ಗಂಡನ ಮನೆಗೆ ಕರೆದುಕೊಂಡು ಹೋಗಿದ್ದು, ಗಂಡನ ಮನೆಯಲ್ಲಿ ತಾನು ಈ ಕೇಸಿನ ಆರೋಪಿತರೊಂದಿಗೆ ವಾಸವಿದ್ದೆ, ಆಶಾಡ ಮಾಸದ ಕಾಲಕ್ಕೆ ತಾನು ತನ್ನ ತವರು ಮನೆಗೆ ಬಂದಿರುತ್ತೇನೆ ಮತ್ತು ತನ್ನ ಒಡವೆಗಳೆಲ್ಲಾ ಗಂಡನ ಮನೆಯಲ್ಲೇ ಇಟ್ಟುಕೊಂಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆಃ3- ಪ್ರಾಸಾ-1 ರವರು ಮುಂದುವರೆದು, ಆಷಾಡ ಮುಗಿಸಿ ಗಂಡನ ಮನೆಗೆ ಹೋದಾಗ ಒಡವೆಗಳನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆಂಬ ವಿಚಾರ ತಿಳಿಯಿತು ಅದನ್ನು ಕೇಳಿದ ಕಾರಣ ನನಗೆ ಹಣದ ತೊಂದರೆಯಿದೆ ನಿನ್ನ ತಂದೆ ತಾಯಿಯಿಂದ ಹಣವನ್ನು ತರುವಂತೆ ಪ್ರತೀ ದಿನ ನನಗೆ ಹಿಂಸೆ ನೀಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ4ಃ ಪ್ರಾಸಾ1 ರವರು ಮುಂದುವರೆದು, ಈ ವಿಚಾರ ನನ್ನ ಪೋಷಕರ ಗಮನಕ್ಕೆ ತಂದ ನಂತರ ಅವರು 4 ನೇ ಆರೋಪಿ ಖಾತೆಗೆ ರೂ.50,000 ಹಣವನ್ನು ದಿನಾಂಕ 07.08.2019 ಕ್ಕೆ ಹಾಗೂ ರೂ.80,000 ಹಣವನ್ನು ದಿನಾಂಕ 14.08.2019 ಕ್ಕೆ ಜಮಾ ಮಾಡಿರುತ್ತಾರೆ ಹಾಗೂ ರೂ.30,000 ಹಣವನ್ನು ಚಾಸಾ-5 ಮತ್ತು 6 ರವರಿಂದಲೂ ನಗದಾಗಿ ಪಡೆದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ5ಃ ಪ್ರಾಸಾ.1 ರವರು ಮುಂದುವರಿದು, 1 ನೇ ಆರೋಪಿ ಆತ ಬೆಂಗಳೂರಿನಲ್ಲಿ ಭಾರತಿ ಸೀಮೆಂಟಿನಲ್ಲಿ ಸಿವಿಲ್ ಇಂಜಿಯರ್ ಆಗಿ ಕೆಲಸ ಮಾಡುತ್ತಿದ್ದು, ಬೆಂಗಳೂರಿನಲ್ಲಿ ಆತ ವಾಸವಿದ್ದ ಮನೆಗೆ ತನ್ನನ್ನು ಕರೆದುಕೊಂಡು ಹೋದರು ಅಲ್ಲಿಯೂ ಸಹ ನನಗೆ ಹಿಂಸೆ ನೀಡಿದ್ದು, ಮನೆಯಲ್ಲಿದ್ದ ವಸ್ತುಗಳನ್ನು ಒಡೆಯುವುದು, ನನಗೆ ಊಟ ಸರಿಯಾಗಿ ನೀಡದೇ ಇರುವುದನ್ನು ಮಾಡುತ್ತಿದ್ದು, ಗಂಡನ ರೀತಿ ನಡೆದುಕೊಳ್ಳಬೇಕಾದಲ್ಲಿ ಹಣ ನೀಡುವಂತೆ ಇಲ್ಲವಾದಲ್ಲಿ ನಿನಗೆ ವಿಚ್ಛೇದನೆ ನೀಡಿ ತಾನು ಮತ್ತೊಂದು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ 6ಃ ಪ್ರಾಸಾ.1 ರವರು ಮುಂದುವರಿದು, ತನ್ನ ಪೋಷಕರಿಗೆ ತನ್ನ ಅತ್ತೆ ಮಾವ ಅಂದರೆ ಈ ಕೇಸಿನ 2 ಹಾಗೂ 3 ನೇ ಆರೋಪಿತರು ಬೆಂಗಳೂರಿನಲ್ಲಿರುವ ಸೈಟನ್ನು ಮಾರಿ ಹಣ ಕೊಡುವಂತೆ ಕೇಳುತ್ತಿದ್ದರು. ರೂ.20 ಲಕ್ಷ ಹಣ ಕೊಟ್ಟರೆ ಮಾತ್ರ ನಿನ್ನ ಜೊತೆ ಗಂಡನ ರೀತಿ ಇರುತ್ತೇನೆಂದು ಹೇಳುತ್ತಾ ಕೆಟ್ಟದಾಗಿ ಮಾತನಾಡುತ್ತಿದರು ಮತ್ತು ತಾಳಿಯನ್ನು ಕೊಡುವಂತೆ ನನಗೆ ಹೊಡಿ ಬಡಿ ಮಾಡಿ ಅದನ್ನು ದಿನಾಂಕ 29.12.2019 ರಂದು 1 ನೇ ಆರೋಪಿ ಕಿತ್ತುಕೊಂಡಿರುತ್ತಾರೆ ಮತ್ತು ತನ್ನ ತಾಯಿ ನನಗೆ ದೂರವಾಣಿ ಕರೆ ಮಾಡಿ, ಅವರಿಗೆ ತಾನು ವಿಚಾರ ತಿಳಿಸಿದಂತೆ ತನ್ನ ಅಣ್ಣ, ಚಿಕ್ಕಮ್ಮ ಬಂದು ತನ್ನನ್ನು ಅಲ್ಲಿಂದ ಕರೆದುಕೊಂಡು ಬಂದರು ಮತ್ತು ತನ್ನ ಅಣ್ಣ ಹಾಗೂ ಚಿಕ್ಕಮ್ಮನವರು ಆರೋಪಿತರಲ್ಲಿ ವಿಚಾರಿಸಲು ಹೋದಾಗ ಅವರ ಜೊತೆಯಲ್ಲಿಯೂ ಗಲಾಟೆ ಮಾಡಿ ಅವರಿಗೂ ಕೆಟ್ಟ ಪದಗಳ ಬಳಕೆ ಮಾಡಿ ಬೈದಿರುತ್ತಾರೆ ಹಾಗೂ ಪಂಚಾಯತಿ ಸಹ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ7ಃ ಪ್ರಾಸಾ.1 ರವರು ಮುಂದುವರಿದು, ಸ್ವಲ್ಪ ದಿನ ಸರಿಯಾಗಬಹುದೆಂದು ತನ್ನ ಪೋಷಕರು ತನ್ನ ತವರು ಮನೆಗೆ ಕರೆತಂದರು, ಆದರೂ ತನ್ನ ತವರು ಮನೆಗೂ ಸಹ ಬಂದು ಜಗಳ ಮಾಡಿರುತ್ತಾರೆ ಮತ್ತು ಅಲ್ಲಿ 1 ನೇ ಆರೋಪಿ ದುಡ್ಡನ್ನು ಕೊಟ್ಟರೆ ಮಾತ್ರ ನೀನು ನನ್ನ ಜೊತೆ ಬರಬಹುದೆಂದು ಗಲಾಟೆ ಮಾಡಿ, ತನ್ನ ಕುತ್ತಿಗೆ ಹಿಸುಕಿ, ತನ್ನ ಎಡಕಪಾಲದ ಭಾಗಕ್ಕೆ ಹಲ್ಲೆ ಮಾಡಿರುತ್ತಾರೆ ಮತ್ತು ತನ್ನ ಚೀರಾಟ ಕೇಳಿ ಅಕ್ಕಪಕ್ಕದ ಮನೆಯವರು ಬಂದು ಬಿಡಿಸಿದ್ದು, ಆಗ 1 ನೇ ಆರೋಪಿ ನಿನ್ನನ್ನು ಸಾಯಿಸುತ್ತೇನೆಂದು ತನಗೆ ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1

ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ8ಃ ಪ್ರಾಸಾ.1 ರವರು ಮುಂದುವರಿದು, ಕೋವಿಡ್ ಕಾರಣಕ್ಕಾಗಿ ತನ್ನ ಅಜ್ಜಿ ಮೃತರಾದರು ಮತ್ತು 14 ದಿನಗಳ ಕಾಲ ಹೋಂ ಕ್ವಾರೆಂಟೈನ್ನಲ್ಲಿ ತಾವು ಇದ್ದ ಕಾರಣ ನಿಗದಿತ ಅವಧಿ ಮುಕ್ತಯಗೊಂಡ ನಂತರದಲ್ಲಿ ತಾನು ನಿಪಿ.1 ರಂತೆ ದೂರನ್ನು ನೀಡಿದ್ದು ಮತ್ತು ದಿನಾಂಕ 31.08.2020 ರಂದು ತಾನು ವಾಸವಿದ್ದ ತನ್ನ ತವರು ಮನೆಯಲ್ಲಿ ನಿಪಿ.2 ರಂತೆ ಪೊಲೀಸರು ಮಹಜರ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ9ಃ ಪ್ರಾಸಾ.1 ರವರು ಮುಂದುವರಿದು, ದಿನಾಂಕ 08.09.2020 ರಂದು ತಾನು ಮತ್ತು 1 ನೇ ಆರೋಪಿ ಬೆಂಗಳೂರಿನ ನಾಗರಬಾವಿಯಲ್ಲಿ ವಾಸವಿದ್ದ ಮನೆಯಲ್ಲಿ ನಿಪಿ.5 ರಂತೆ ಮಹಜರ್ ಮಾಡಿದರು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ10ಃ ಪ್ರಾಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ-8 ರ ಕಾಲಕ್ಕೆ ತಾನು ತನ್ನ ಹಾಗೂ 1 ನೇ ಆರೋಪಿ ವಿವಾಹ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಿದ್ದು, ಮದುವೆ ಕಾಲಕ್ಕೆ ತೆಗೆಯಲಾದ 7 ಪೊಟೊಗಳು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-10 ರಿಂದ 16 ಎಂದು ಗುರುತಿಸಿದ್ದು, ಮಲ್ಲೇಶ್ವರ ಸಮುದಾಯ ಭವನದ 9 ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ-17 ಎಂದು ಗುರುತಿಸಿದ್ದು, ವಾದಿರಾಜ್ ಜುವೆಲ್ಸಿನ 8 ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ.18 ಎಂದು ಗುರುತಿಸಿದ್ದು, ಜಿ. ಕೆ. ಜುವೆಲ್ಲರ್ಸಿನ 4 ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ-19

ಎಂದು ಗುರುತಿಸಿದ್ದು, ಹಣ ಜಮಾ ಮಾಡಿರುವ ಕುರಿತಾಗಿ 3 ಪೇಯಿಂಗ್ ಸ್ಲಿಪ್ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-20 ರಿಂದ 22 ಎಂದು ಗುರುತಿಸಿದ್ದು, ಸ್ಟೇಟೆಂಟ್ ಆಪ್ ಅಕೌಂಟಿನ ದಾಖಲೆಯನ್ನು ನಿಪಿ-23 ಎಂದು ಬ್ಯಾಂಕಿನವರು ಈ ಕೇಸಿನ ತನಿಖಾಧಿಕಾರಿಗೆ ನೀಡಿರುವ ಪತ್ರವನ್ನು ನಿಪಿ-24 ಎಂದು ಗುರುತಿಸಿದ್ದು, ತನ್ನ ಅಜ್ಜಿ ಜಯಲಕ್ಷ್ಮಮ್ಮನವರ ಡೆತ್ ಸಮ್ಮರಿ ದಾಖಲೆಯನ್ನು ನಿಪಿ-25 ಎಂದು ಗುರುತಿಸಿ ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ-11- ಪ್ರಾಸಾ-2 ಪಾರ್ವತಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ ದಿ: 09.06.2019 ರಂದು ಚಾಸಾ1 ರವರ ವಿವಾಹವನ್ನು 1 ನೇ ಆರೋಪಿಯೊಂದಿಗೆ ಭದ್ರಾವತಿಯ ಮಲ್ಲೇಶ್ವರ ಸಮುದಾಯ ಭವನದಲ್ಲಿ ನೆರವೇರಿಸಲಾಗಿದೆ ಮತ್ತು ಮದುವೆ ಸಮಯಕ್ಕೆ ಹುಡುಗನಿಗೆ 10 ತೋಲ ಬಂಗಾರ, ಸೂಟು, 3 ಲಕ್ಷ ಹಣ ಕೊಟ್ಟು, ಗಂಡಿನ ಕಡೆಯವರ ಆಪೇಕ್ಷೆಯಂತೆ ಮದುವೆಯ ಸಂಪೂರ್ಣ ವೆಚ್ಚವನ್ನು ತಾವೇ ಭರಿಸಿದ್ದು, ಮದುವೆ ನಂತರ ಚಾಸಾ 1 ರವರನ್ನು ದಾಸಪುರದ ಆಕೆಯ ಗಂಡನ ಮನೆಗೆ ಕರೆದುಕೊಂಡು ಹೋದರು ಮತ್ತು ಚಾಸಾ1 ರವರ ಗಂಡನ ಮನೆಯಲ್ಲಿ ಆಕೆಯೊಂದಿಗೆ ಈ ಕೇಸಿನ ಎಲ್ಲಾ ಆರೋಪಿತರು ವಾಸ ಇದ್ದರು ಮತ್ತು ಮದುವೆಯಾದ ಮೊದಲ 15 ದಿನಗಳ ಕಾಲ ಚಾಸಾ1 ರವರನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ, ಅನಂತರ ಬೆಂಗಳೂರಿನ ನಾಗರಬಾವಿಯಲ್ಲಿ ಒಂದು ಬಾಡಿಗೆ ಮನೆಯನ್ನು ಮಾಡಿ 1 ನೇ ಆರೋಪಿ ಚಾಸಾ1 ರವರನ್ನು ಕರೆದುಕೊಂಡು ಹೋದರು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ12ಃ ಪ್ರಾಸಾ.2 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿ ಮನೆಗೆ ಬೇಕಾದ ಯಾವುದೇ ವಸ್ತುಗಳನ್ನು ತಂದು ಕೊಡುತ್ತಿರಲಿಲ್ಲ, ಚಾಸಾ.1 ರವರಿಗೆ ಹಿಂಸೆ ನೀಡಿರುತ್ತಾನೆ ಮತ್ತು ಅಷಾಡ ಇದ್ದ ಕಾಲಕ್ಕೆ ಚಾಸಾ.1 ರವರನ್ನು ತವರು ಮನೆಗೆ ಕರೆದುಕೊಂಡು

ಬಂದಿದ್ದು, ಆಕೆ ತವರು ಮನೆಗೆ ಬರುವ ಸಮಯಕ್ಕೆ ಆಕೆಗೆ ಸೇರಿದ ಎಲ್ಲಾ ಒಡವೆಗಳು ಬೆಂಗಳೂರಿನ 1 ನೇ ಆರೋಪಿ ವಾಸ ಇದ್ದ ಮನೆಯಲ್ಲಿಯೇ ಬಿಟ್ಟು ಬಂದಿದ್ದಳು ಮತ್ತು ಆಷಾಡ ಮುಗಿಸಿ ವಾಪಸ್ಸು ಹೋದ ಕಾಲಕ್ಕೆ, 1 ನೇ ಆರೋಪಿ ಆ ಒಡವೆಗಳನ್ನು ಅಡವಿಟ್ಟು ಮಾರಿಕೊಂಡಿರುತ್ತಾನೆ, ಅದನ್ನು ತಾವು ಬಿಡಿಸಿಕೊಟ್ಟೆವು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ13ಃ ಪ್ರಾಸಾ.2 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪುನಃ ಹಣ ತರುವಂತೆ ಚಾಸಾ.1 ರವರಿಗೆ 1 ನೇ ಆರೋಪಿ ಹಿಂಸೆ ನೀಡಿರುತ್ತಾನೆ ಮತ್ತು ದಿ: 07.08.19 ರಂದು 1 ನೇ ಆರೋಪಿಯ ತಮ್ಮನಾದ 4 ನೇ ಆರೋಪಿ ಖಾತೆಗೆ ರೂ.50 ಸಾವಿರ ಹಣವನ್ನು ಹಾಕಿರುತ್ತೇವೆ ಮತ್ತು ದಿ: 14.08.19 ರಂದು ಪುನಃ ರೂ.80 ಸಾವಿರ ಹಣವನ್ನು 4 ನೇ ಆರೋಪಿಯ ಖಾತೆಗೆ ಹಾಕಿರುತ್ತೇವೆ ಮತ್ತು ಅದಾಗಿಯ ಚಾಸಾ1 ರವರಿಗೆ ಹಿಂಸೆ ನೀಡುವುದನ್ನು ಆತ ನಿಲ್ಲಿಸಲಿಲ್ಲ ಮತ್ತು ದಿ: 23.012.19 ರಂದು ಪುನಃ 4 ನೇ ಆರೋಪಿ ಖಾತೆಗೆ ರೂ.20 ಸಾವಿರ ಹಣವನ್ನು ಹಾಕಿರುತ್ತೇವೆ ಮತ್ತು ನಂತರದಲ್ಲಿ ಚಾಸಾ1 ರವರಿಗೆ ಹಿಂಸೆ ನೀಡುತ್ತಿದ್ದ ಕಾರಣ ಚಾಸಾ5 ಮತ್ತು 6 ರವರುಗಳು 1 ನೇ ಆರೋಪಿಗೆ ನಗದು ರೂಪದಲ್ಲಿ ರೂ.30 ಸಾವಿರ ಹಣವನ್ನು ನೀಡಿದರು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ14ಃ ಪ್ರಾಸಾ.2 ರವರು ಮುಂದುವರಿದು, ದಿ: 29.12.19 ರಂದು ಪುನಃ 1 ನೇ ಆರೋಪಿ ಚಾಸಾ1 ರವರಿಗೆ ಹೆಚ್ಚಿನ ಹಣ ತರುವಂತೆ ಹಿಂಸೆ ನೀಡಿರುತ್ತಾನೆ ಮತ್ತು ಆಕೆಗೆ ಹಲ್ಲೆ ಮಾಡಿರುತ್ತಾನೆ ಮತ್ತು ಅದರ ಕಾರಣ ಆಕೆ ಪ್ರಜ್ಞಾಹಿನಳಾಗಿ ಬಿದಿದ್ದಳು ಮತ್ತು ಈ ವಿಚಾರ ತನಗೆ ತಿಳಿದು ಚಾಸಾ4 ರಿಂದ 6 ರವರಿಗೆ ತಾನು ಅದನ್ನು ತಿಳಿಸಿ, ಚಾಸಾ 1 ರವರನ್ನು ಕರೆತರುವಂತೆ ಅವರಿಗೆ ತಿಳಿಸಿರುತ್ತೇನೆ ಮತ್ತು ಚಾಸಾ1 ರವರಿಗೆ ಚಾಸಾ4 ರವರು ಆಸ್ಪತ್ರೆಯಲ್ಲಿ ತೋರಿಸಿ ನಂತರ ತಮ್ಮ ಮನೆಗೆ ಆಕೆಯನ್ನು ಕರೆತಂದರು ಮತ್ತು ದಿ: 25.07.20 ರಂದು ಭದ್ರಾವತಿಯ

ಉಜ್ಜನಿಪುರದಲ್ಲಿ ತಾವು ವಾಸವಾಗಿರುವ ಮನೆಗೆ 1 ನೇ ಆರೋಪಿ ಬಂದರು ಮತ್ತು ಚಾಸಾ1 ಹಾಗೂ 1 ನೇ ಆರೋಪಿ ಏನೋ ಮಾತನಾಡುತ್ತಿದ್ದಾರೆ ಎಂದು ತಾವು ತಿಳಿದಿದ್ದು, ಆದರೆ ಆಕೆಗೆ ಆತ ಆ ದಿನದಂದು ಸಹ ಹಲ್ಲೆ ಮಾಡಿರುತ್ತಾನೆ, ಹೆಚ್ಚಿನ ಹಣ ನೀಡುವಂತೆ ಕೇಳಿರುತ್ತಾನೆ ಮತ್ತು ಇದರಿಂದಾಗಿ ಆಕೆ ಪ್ರಜ್ಞಾಹಿನಾಳಾದಳು, ಆ ಕಾರಣ ಆಕೆಗೆ ಭದ್ರಾವತಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು ಮತ್ತು ಈ ಘಟನೆ ವಿಚಾರವಾಗಿ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ15ಃ ಪ್ರಾಸಾ.2 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಚಾಸಾ 1 ರವರಿಗೆ 2 ರಿಂದ 4 ನೇ ಆರೋಪಿತರು ಸಹ ಮಾನಸಿಕ ಹಿಂಸೆ / ಕಿರುಕುಳವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆಃ16. ಪ್ರಾಸಾ.3 ರವಿಕಿರಣ ರವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಚಾಸಾ1 ಹಾಗೂ 1 ನೇ ಆರೋಪಿಯ ವಿವಾಹ ಭದ್ರಾವತಿಯ ಮಲ್ಲೇಶ್ವರ ಸಬಾ ಭವನದಲ್ಲಿ 2019 ರಲ್ಲಿ ಜರುಗಿತು ಮತ್ತು ವರೋಪಚಾರದ ರೂಪದಲ್ಲಿ 10 ತೊಲ ಬಂಗಾರ, ರೂ.3 ಲಕ್ಷ ಹಣವನ್ನು ನೀಡಿದ್ದು, ಮದುವೆಯ ಸಂಪೂರ್ಣ ಖರ್ಚನ್ನು ತಾವೇ ಭರಿಸಿರುತ್ತೇವೆ ಮತ್ತು ಆಷಾಡಕ್ಕೆಂದು ಚಾಸಾ 1 ರವರನ್ನು ಮನೆಗೆ ಕರೆದುಕೊಂಡು ಬಂದಿದ್ದು, ಆಕೆಗೆಂದು ನೀಡಿದ್ದ 15 ತೊಲ ಬಂಗಾರವನ್ನು ಅಡವಿಟ್ಟಿದ್ದರು ಮತ್ತು ಅದನ್ನು ತಾವು ಬಿಡಿಸಿಕೊಟ್ಟಿರುತ್ತೇವೆ ಮತ್ತು ದಿ:07.08.19 ರಂದು ಕಷ್ಟ ಎಂದು ಕೇಳಿಕೊಂಡ ಕಾರಣ ರೂ.50 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು ಮತ್ತು ದಿಃ 14.08.19 ರಂದು ರೂ.80 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು ಮತ್ತು ದಿ: 23.12.19 ರಂದು ರೂ.20 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು. ಸದರಿ ಹಣವನ್ನು 4 ನೇ ಆರೋಪಿಯ ಖಾತೆಗೆ ಜಮಾ ಮಾಡುವಂತೆ

1 ನೇ ಆರೋಪಿ ಖಾತೆ ಸಂಖ್ಯೆ ನೀಡಿ ತಿಳಿಸಿದ್ದರು, ಅಂತೆಯೇ 4 ನೇ ಆರೋಪಿಯ ಖಾತೆಗೆ ಹಣ ಜಮಾ ಮಾಡಲಾಗಿದೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ17ಃ ಪ್ರಾಸಾ.3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 29.12.19 ರಂದು ಚಾಸಾ1 ರವರ ಕಿವಿಗೆ ಹಲ್ಲೆ ಮಾಡಿ, ಆಕೆಗೆ ರಕ್ತತರಿಸಿರುತ್ತಾರೆ ಎಂಬ ವಿಚಾರ ತನಗೆ ಚಾಸಾ3 ರವರಿಂದ ತಿಳಿಯಿತು ಮತ್ತು ತಾನು, ಚಾಸಾ5 ಮತ್ತು 6 ರವರು ಚಾಸಾ1 ಇದ್ದ ಸ್ಥಳಕ್ಕೆ ಹೋಗಿ, ಆಕೆಗೆ ಚಿಕಿತ್ಸೆಯನ್ನು ಕೋಡಿಸಿ ನಂತರ ಆಕೆಯನ್ನು ಅಲ್ಲೆ ಬಿಟ್ಟು ಬಂದಿರುತ್ತೇವೆ ಮತ್ತು ಇದೇ ರೀತಿ ಪುನಃ ಘಟನೆ ಆದಕಾರಣ ಚಾಸಾ.1 ರವರನ್ನು ಭದ್ರಾವತಿಯ ತಮ್ಮ ಮನೆಗೆ ಕರೆದುಕೊಂಡು ಬಂದೆವು ಮತ್ತು 1 ನೇ ಆರೋಪಿ ಆಗಾಗ ಭದ್ರಾವತಿಯ ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಮತ್ತು ದಿ: 25.07.20 ರಂದು 1 ನೇ ಆರೋಪಿ ಭದ್ರಾವತಿಯ ನಮ್ಮ ಮನೆಗೆ ಬಂದು ಚಾಸಾ1 ರವರೊಂದಿಗೆ ರೂಂ ನಲ್ಲಿ ಮಾತನಾಡುತ್ತಿದ್ದರು ಮತ್ತು ಆ ಸಮಯಕ್ಕೆ ಆಕೆಗೆ ಹಲ್ಲೆ ಮಾಡಿ, ಆಕೆಯನ್ನು ಸಾಯಿಸುವುದಾಗಿ ಬೆದರಿಕೆಯನ್ನು ನೀಡಿರುತ್ತಾನೆ ಮತ್ತು ಚಾಸಾ1 ರವರು ಜೋರಾಗಿ ಕಿರುಚಿದಳು ಮತ್ತು ಅಕ್ಕಪಕ್ಕದ ಮನೆಯವರಾದ ಚಾಸಾ8 ಮತ್ತು 9 ಮತ್ತು ನಾವೇಲ್ಲರೂ ಸೇರಿ ಬಿಡಿಸಿದೆವು ಮತ್ತು ಈ ವಿಚಾರವಾಗಿ ದಿ: 30.08.20 ರಂದು ಚಾಸಾ.1 ರವರು ಠಾಣೆಗೆ ದೂರನ್ನು ನೀಡಿರುತ್ತಾರೆ ಮತ್ತು ದಿ: 31.08.20 ರಂದು ತಾನು ಠಾಣೆಗೆ ಹೋಗಿ ಕೇಸಿನ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ18ಃ ಪ್ರಾಸಾ.3 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ,** ಚಾಸಾ1 ರವರಿಗೆ 2 ರಿಂದ 4 ನೇ ಆರೋಪಿತರು ಸಹ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿರುತ್ತಾರೆ ಮತ್ತು ಚಾಸಾ1 ರವರು ಆಕೆ ಒಳಗಾಗುತ್ತಿದ್ದ ಹಿಂಸೆ ಕುರಿತು ತಮಗೆ ಫೋನಿನಲ್ಲಿ ತಿಳಿಸುತ್ತಿದ್ದಳು ಎಂದು ನುಡಿಯುತ್ತಾರೆ ಮತ್ತು ಬೆಂಗಳೂರಿನಲ್ಲಿ ತನ್ನ ತಾಯಿ

ಹೆಸರಿಗೆ ಇದ್ದ ಸೈಟನ್ನು ಮಾರಾಟ ಮಾಡಿ ಹಣವನ್ನು ತಂದು ಕೊಡುವಂತೆ ಚಾಸಾ1 ರವರಿಗೆ ಹಿಂಸೆಯನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ-19- ಪ್ರಾಸಾ-4 ಭ್ಯಾಗಮ್ಮ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಗಳು ತನಗೆ ಗೊತ್ತು ಮತ್ತು ದಿ: 09.06.19 ರಂದು 1 ನೇ ಆರೋಪಿ ಮತ್ತು ಚಾಸಾ 1 ರವರ ಮದುವೆ ಜನ್ನಾಪುರದ ಮಲ್ಲೇಶ್ವರ ಸಭಾ ಭವನದಲ್ಲಿ ನಡೆದಿರುತ್ತದೆ ಮತ್ತು ತಾನು ಮದುವೆಗೆ ಹೋಗಿರುತ್ತೇನೆ ಮತ್ತು ಮದುವೆಯಾದ ನಂತರ ವರದಕ್ಷಿಣೆಗಾಗಿ ಜಗಳ ಮಾಡುತ್ತಿದ್ದರು ಮತ್ತು ಈ ವಿಚಾರವನ್ನು ತನಗೆ ಚಾಸಾ1 ರವರ ತಂದೆ ತಾಯಿ ತಿಳಿಸಿರುತ್ತಾರೆ ಮತ್ತು ದಿಃ 25.07.20 ರಂದು ಸಂಜೆ 4.30 ಗಂಟೆ ಸಮಯದಲ್ಲಿ 1 ನೇ ಆರೋಪಿ ಬಂದು ಚಾಸಾ 1 ರವರಿಗೆ ಹೊಡೆಯುತ್ತಿದ್ದರು ಮತ್ತು ಚಾಸಾ 1 ರವರು ಜೋರಾಗಿ ಕಿರುಚಿದ್ದು ತಾವು ಅಲ್ಲಿಗೆ ಹೋಗಿ ನೋಡಿರುತ್ತೇವೆ ಮತ್ತು ಚಾಸಾ1 ರವರ ಕಪಾಳಕ್ಕೆ ಹೊಡೆದಿದ್ದು ಆಕೆ ಕೆಳಗೆ ಬಿದ್ದಿರುತ್ತಾಳೆ ಮತ್ತು ವರದಕ್ಷಿಣೆ ಹಣ ನೀಡದಿದ್ದರೆ ನಿನ್ನನ್ನು ಸಾಯಿಸುತ್ತೇನೆ ಎಂದು ಹೆದರಿಸುತ್ತಿದ್ದರು ಮತ್ತು ನಂತರ ಅವರು ಅಲ್ಲಿಂದ ಹೊರಟು ಹೋಗಿರುತ್ತಾರೆ ಮತ್ತು ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.20ಃ ಪ್ರಾಸಾ.4 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಮದುವೆಗೂ ಮೊದಲು ನಿಶ್ಚಿತಾರ್ಥ ನಡೆದಿದ್ದು ತಾನು ಹಾಜರಿದ್ದು ಆರೋಪಿಗಳ ಕೋರಿಕೆಯಂತೆ 100 ಗ್ರಾಂ ಚಿನ್ನದ ಆಭರಣ ಮತ್ತು 3 ಲಕ್ಷ ಹಣವನ್ನು ವರದಕ್ಷಿಣೆಯಾಗಿ ಪಡೆದಿದ್ದರು ಮತ್ತು ಆರೋಪಿಗಳು ಚಾಸಾ 1 ರವರ ಮನೆಗೆ ಬಂದು ಅವರ ತಂದೆ ತಾಯಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ಹೆಚ್ಚಿನ ವರದಕ್ಷಿಣ ನೀಡಿದರೆ ತಮ್ಮ ಮಗಳನ್ನು ಕರೆದುಕೊಂಡು ಹೋಗುವುದಾಗಿ ಇಲ್ಲದಿದ್ದರೆ ಬಿಟ್ಟು ಹೋಗುತ್ತೇವೆಂದು ಹೆದರಿಸಿರುತ್ತಾರೆ

ಮತ್ತು ಚಾಸಾ1 ರವರು ತನ್ನ ಗಂಡನ ಮನೆಯವರು ತನಗೆ ಹೆಚ್ಚಿನ ವರದಕ್ಷಿಣೆ ನೀಡುವಂತೆ ಕಿರುಕುಳ ನೀಡುತ್ತಿರುವುದಾಗಿ ಖುದ್ದಾಗಿ ತನಗೆ ತಿಳಿಸಿದ್ದರು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ-21- ಪ್ರಾಸಾ-5 ಚಂದ್ರೇಗೌಡ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ, ದಿ: 09.06.19 ರಂದು ಚಾಸಾ1 ಮತ್ತು 1 ನೇ ಆರೋಪಿ ಮದುವೆ ಆಗಿರುತ್ತದೆ ಮತ್ತು ಮದುವೆ ಸಮಯದಲ್ಲಿ 3 ಲಕ್ಷ ರೂ. ಹಣ 100 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ಆರೋಪಿಗಳು ಪಡೆದಿದ್ದರು ಮತ್ತು ಮದುವೆಯಾದ ನಂತರ 1 ನೇ ಆರೋಪಿ ಮತ್ತು ಚಾಸಾ1 ರವರು ಬೆಂಗಳೂರಿನಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು ಮತ್ತು ಮದುವೆಯಾದ ನಂತರ ಆಷಾಡಕ್ಕೆಂದು ಚಾಸಾ 1 ರವರನ್ನು ಭದ್ರಾವತಿಗೆ ಕರೆದುಕೊಂಡು ಬಂದು ಬಿಟ್ಟಿದ್ದರು, ನಂತರ ಆರೋಪಿಗಳು ಸಾಲ ಇರುವುದಾಗಿ ಹೇಳಿ ಒಡವೆಗಳನ್ನು ಅಡಮಾನ ಮಾಡಿ ಚಾಸಾ1 ರವರಿಗೆ ಹಿಂಸೆ ನೀಡುತ್ತಿದ್ದ ಬಗ್ಗೆ ನಮಗೆ ತಿಳಿಯಿತು ಮತ್ತು ನಂತರ ತವರು ಮನೆಯಿಂದ ಹಣವನ್ನು ಪಡೆದುಕೊಂಡು ಬರುವಂತೆ ಚಾಸಾ 1 ರವರಿಗೆ ಹಿಂಸೆ ನೀಡುತ್ತಿದ್ದರು ಮತ್ತು ನಂತರ ದಿ: 25.08.20 ರಂದು ಚಾಸಾ1 ರವರ ಅಜ್ಜಿ ಆರೋಗ್ಯ ಸರಿ ಇಲ್ಲದ ಕಾರಣ ನಾವು ಭದ್ರಾವತಿಗೆ ಬಂದಿದ್ದೇವು, ಆಗ 1 ನೇ ಆರೋಪಿಯು ಅಲ್ಲಿಗೆ ಬಂದು ಸಂಜೆ 4.30 ರಿಂದ 5 ಗಂಟೆ ಒಳಗೆ ಹಣದ ವಿಚಾರವಾಗಿ ಚಾಸಾ1 ರವರೊಂದಿಗೆ ಗಲಾಟೆ ಮಾಡುತ್ತಿದ್ದರು, ನಂತರ ತಾವು ಹೋಗಿ ನೋಡಿದಾಗ ಚಾಸಾ1 ಮತ್ತು 1 ನೇ ಆರೋಪಿ ಹೊಡೆದಾಡುತ್ತಿದ್ದರು. 1 ನೇ ಆರೋಪಿ ತಾನು ಸಾಲ ಮಾಡಿರುವುದಾಗಿ ಹಣವನ್ನು ಕೊಡಿಸುವಂತೆ ಕೇಳುತ್ತಿದ್ದನು ಮತ್ತು ಸದರಿ ಸಮಯದಲ್ಲಿ 1 ನೇ ಆರೋಪಿ ಚಾಸಾ1 ರವರಿಗೇ ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ ಮತ್ತು ಚಾಸಾ1 ರವರು ಕೆಳಗೆ ಬಿದ್ದು ಅವರಿಗೆ ಪೆಟ್ಟಾಗಿರುತ್ತದೆ ಮತ್ತು ಸದರಿ ಸಮಯದಲ್ಲಿ ನಾನು ಚಾಸಾ1, 5 ಮತ್ತು 6 ಮತ್ತು ಎಲ್ಲಾರೂ ಇದ್ದೇವು ಮತ್ತು ತಾವು ಸಮಾಧಾನ ಮಾಡಿ ಗಲಾಟೆ ಬಿಡಿಸಿದೇವು ಮತ್ತು ಆಗ 1 ನೇ ಆರೋಪಿ ತನಗೆ ಹಣ ಬೇಕೆ ಬೇಕು ಎಂದು ಹೇಳಿರುತ್ತಾನೆ, ಹಣ ಕೊಡದಿದ್ದರೆ ತಾನು ಹೊಡೆದು ಜೈಲಿಗೆ ಹೋಗುತ್ತೇನೆಂದು ಹೇಳಿರುತ್ತಾನೆ ಮತ್ತು ಈ ವಿಚಾರವಾಗಿ ಪಂಚಾಯತಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆಃ 22 ಪ್ರಾಸಾ.5 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ,** 1 ನೇ ಆರೋಪಿ ದುಶ್ಚಟಗಳಿಗಾಗಿ ಮತ್ತು ಐಪಿಎಲ್ ಬೆಟ್ಟಿಂಗ್ ಗಾಗಿ ಸಾಲ ಮಾಡಿಕೊಂಡಿದ್ದು, ಸಣ್ಣ ಪುಟ್ಟ ವಿಚಾರಗಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ ವಿಚಾರವನ್ನು ಚಾಸಾ 1 ರವರು ತಿಳಿಸಿರುತ್ತಾರೆ ಮತ್ತು ಬೆಂಗಳೂರಿನಲ್ಲಿರುವ ನಿವೇಶನವನ್ನು ಮಾರಾಟ ಮಾಡಿ ಹಣವನ್ನು ಕೊಡುವಂತೆ ಹೇಳುತ್ತಿದ್ದರು, ಇಲ್ಲದಿದ್ದರೆ ವಿಚ್ಛೇದನ ನೀಡುವುದಾಗಿ ಹೆದರಿಸಿರುತ್ತಾರೆ ಮತ್ತು 2 ರಿಂದ 4 ನೇ ಆರೋಪಿಗಳು ಸಹ 1 ನೇ ಆರೋಪಿಗೆ ಸಹಕರಿಸುತ್ತಿದ್ದು, 07.08.19 ರಂದು 50 ಸಾವಿರ, 14.08.19 ರಂದು 80 ಸಾವಿರ, ದಿ: 23.12.19 ರಂದು 20 ಸಾವಿರ ರೂ. ಹಣವನ್ನು 1 ನೇ ಆರೋಪಿ ಖಾತೆಗೆ ಹಾಕಿರುವುದಾಗಿ ತಿಳಿಸಿದ್ದು, ನಂತರ ಚಾಸಾ2 ಮತ್ತು 3 ರವರ ಹೇಳಿಕೆ ಮೇರೆಗೆ ತಾನು ಮತ್ತು ತನ್ನ ಹೆಂಡತಿ ಖುದ್ದಾಗಿ ಆರೋಪಿ ಮನೆಗೆ ಹೋಗಿ 1 ನೇ ಆರೋಪಿಗೆ 30 ಸಾವಿರ ರೂ. ಹಣವನ್ನು ನೀಡಿರುತ್ತೇವೆ ಮತ್ತು ಸದರಿ ಹಣವನ್ನು ಸಹ ದುಶ್ಚಟಗಳಿಗೆ ಬಳಸಿ ಪುನಃ ಹೆಚ್ಚಿನ ವರದಕ್ಷಿಣೆ ಹಣವನ್ನು ತರುವಂತೆ ಹಿಂಸೆ ನೀಡುತ್ತಿದ್ದರು ಮತ್ತು ದಿ. 29.12.19 ರಂದು ಹೆಚ್ಚಿಗೆ ವರದಕ್ಷಿಣೆ ಹಣ ತರುವಂತೆ ಜಗಳ ಮಾಡಿದ್ದ ಬಗ್ಗೆ ಮತ್ತು ಚಾಸಾ 1 ರವರಿಗೆ ಎಡಗೆನ್ನೆಗೆ ಹೊಡೆದು ಗಲಾಟೆ ಮಾಡಿರುವುದಾಗಿ ತಿಳಿಸಿದ್ದು ತಾವು ಹೋಗಿ ಅವರನ್ನು ಉಪಚರಿಸಿ ಚಿಕಿತ್ಸೆ ಕೊಡಿಸಿರುತ್ತೇವೆ ಮತ್ತು ಈ ವಿಚಾರವನ್ನು 2 ಮತ್ತು 3 ನೇ ಆರೋಪಿಗಳಿಗೆ ತಿಳಿಸಿದ್ದು, ಅವರು ನಿವೇಶನವನ್ನು ಮಾರಾಟ ಮಾಡಿ 1 ನೇ ಆರೋಪಿ ಕೇಳಿದಷ್ಟು ಹಣ ಕೊಡುವಂತೆ ಇಲ್ಲದಿದ್ದರೆ ಚಾಸಾ1 ರವರನ್ನು ವಾಪಸ್ಸು ಕರೆದುಕೊಂಡು ಹೋಗುವಂತೆ ಬೈದಿರುತ್ತಾರೆ ಮತ್ತು ಸದರಿ ಸಮಯದಲ್ಲಿ ಪಂಚಾಯತಿ ಮಾಡಿದ್ದು, ಪಂಚಾಯತಿಗೆ ಬೆಲೆ ಕೊಡದೆ ಜೀವ ಬೆದರಿಕೆ ಹಾಕಿದ್ದು ಹಿಂಸೆ ತಾಳಲಾರದೇ ಚಾಸಾ 1 ರವರು ಅವರ ತಂದೆ ತಾಯಿ ಮನೆಗೆ ಬಂದು ವಾಸವಾಗಿದ್ದರು ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.23ಃ ಪ್ರಾಸಾ.6 ಜಯಲಕ್ಷ್ಮಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 3 ವರ್ಷಗಳ ಹಿಂದೆ ಚಾಸಾ1 ಮತ್ತು 1 ನೇ ಆರೋಪಿ ನಡುವೆ ಮದುವೆ ಆಗಿರುತ್ತದೆ ಮತ್ತು ಮದುವೆಗೆ ತಾನು

ಹೋಗಿದ್ದು, ಮದುವೆ ಸಮಯದಲ್ಲಿ ಚಿನ್ನಾಭರಣಗಳನ್ನು ವರದಕ್ಷಿಣೆಯಾಗಿ ನೀಡಿದ್ದರು ಮತ್ತು 2 ಲಕ್ಷ ರೂ. ವರದಕ್ಷಿಣೆಯಾಗಿ ನೀಡಿದ್ದರು ಮತ್ತು ಮದುವೆಯಾದ ನಂತರ ಬೆಂಗಳೂರಿನಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು ಮತ್ತು ಸುಮಾರು 3 ವರ್ಷಗಳ ಹಿಂದೆ ಚಾಸಾ 1 ರವರು ಅವರ ಅಜ್ಜಿ ನೋಡಲು ಮನೆ ಬಳಿ ಬಂದಿದ್ದರು ಮತ್ತು ಸಂಜೆ 4.30 ಗಂಟೆ ಸಮಯದಲ್ಲಿ ಚಾಸಾ1 ಮತ್ತು 1 ನೇ ಆರೋಪಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಮತ್ತು ನಾವು ಒಳಗಡೆ ಹೋಗಿ ನೋಡಿದಾಗ, ಆರೋಪಿ ಹಣದ ವಿಚಾರವಾಗಿ ಚಾಸಾ1 ರವರೊಂದಿಗೆ ಗಲಾಟೆ ಮಾಡಿ ಚಾಸಾ1 ರವರ ಕಪಾಳಕ್ಕೆ ಹೊಡೆದಿರುತ್ತಾರೆ ಮತ್ತು ಆಗ ಚಾಸಾ2 ರಿಂದ 7 ಇದ್ದರು ಮತ್ತು ತಾವು ಜಗಳವನ್ನು ಬಿಡಿಸಿರುತ್ತೇವೆ ಮತ್ತು ಚಾಸಾ1 ರವರಿಗೆ ನೇಣು ಹಾಕುತ್ತೇನೆ ಎಂದು ಹೆದರಿಸಿದರು, ನಂತರ 1 ನೇ ಆರೋಪಿ ಅಲ್ಲಿಂದ ಹೊರಟು ಹೋಗಿರುತ್ತಾನೆ, ನಂತರ ಚಾಸಾ1 ರವರು ಆರೋಪಿ ಹಣವನ್ನು ತರುವಂತೆ ಸೈಟನ್ನು ಮಾರಾಟ ಮಾಡಿ ಹಣ ನೀಡುವಂತೆ ಕೇಳುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.24ಃ ಪ್ರಾಸಾ.6 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಚಾಸಾ 1 ರವರಿಗೆ 1 ನೇ ಆರೋಪಿ ಜೀವ ಬೆದರಿಕೆ ಹಾಕಿರುತ್ತಾನೆ ಮತ್ತು ಚಾಸಾ.1 ರವರು 1 ನೇ ಆರೋಪಿ ದುಶ್ಚಟಗಳಿಗೆ ಬಲಿಯಾಗಿ ತನ್ನ ಒಡವೆಗಳನ್ನು ಅಡಮಾನ ಮಾಡಿ ಸಾಲ ಮಾಡಿಕೊಂಡಿದ್ದು ಮತ್ತು ಸಣ್ಣ ಪುಟ್ಟ ವಿಚಾರಗಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ ವಿಚಾರವನ್ನು ಚಾಸಾ.1 ರವರು ತಿಳಿಸಿರುತ್ತಾರೆ ಮತ್ತು ಬೆಂಗಳೂರಿನಲ್ಲಿರುವ ನಿವೇಶನವನ್ನು ಮಾರಾಟ ಮಾಡಿ ಹಣವನ್ನು ಕೊಡುವಂತೆ ಹೇಳುತ್ತಿದ್ದರು, ಇಲ್ಲದಿದ್ದರೆ ವಿಚ್ಛೇದನ ನೀಡುವುದಾಗಿ ಹೆದರಿಸಿರುತ್ತಾರೆ ಎಂದು ತಿಳಿಸಿದ್ದು, 2 ರಿಂದ 4 ನೇ ಆರೋಪಿಗಳು ಸಹ 1 ನೇ ಆರೋಪಿಗೆ ಸಹಕರಿಸುತ್ತಿದ್ದರು ಎಂದು ದಿನಾಂಕ 07.08.19 ರಂದು 50 ಸಾವಿರ, ದಿನಾಂಕ 14.08.19 ರಂದು 80 ಸಾವಿರ, ದಿನಾಂಕ 23.12.19 ರಂದು 20 ಸಾವಿರ ರೂ. ಹಣವನ್ನು 1 ನೇ ಆರೋಪಿ ಖಾತೆಗೆ ಹಾಕಿರುವುದಾಗಿ ತಿಳಿಸಿದ್ದು, ನಂತರ ಚಾಸಾ2 ಮತ್ತು 3 ರವರ ಹೇಳಿಕೆ ಮೇರೆಗೆ ಚಾಸಾ ಮತ್ತು 6 ಖುದ್ದಾಗಿ ಆರೋಪಿ ಮನೆಗೆ ಹೋಗಿ 1 ನೇ ಆರೋಪಿಗೆ 30 ಸಾವಿರ ರೂ. ಹಣವನ್ನು ನೀಡಿರುತ್ತಾರೆ ಎಂದು ತಿಳಿಸಿದ್ದು, ದಿನಾಂಕ 29.12.19 ರಂದು ಹೆಚ್ಚಿಗೆ ವರದಕ್ಷಿಣೆ ಹಣ ತರುವಂತೆ ಜಗಳ ಮಾಡಿದ್ದ ಬಗ್ಗೆ ಮತ್ತು ಚಾಸಾ 1 ರವರಿಗೆ ಎಡಗೆನ್ನೆಗೆ ಹೊಡೆದು ಗಲಾಟೆ ಮಾಡಿರುವುದಾಗಿ ತಿಳಿಸಿದ್ದು ಚಾಸಾ5 ಮತ್ತು 6 ರವರು ಹೋಗಿ ಅವರನ್ನು ಉಪಚರಿಸಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ತಿಳಿಸಿದ್ದು, ಈ

ವಿಚಾರವನ್ನು 2 ಮತ್ತು 3 ನೇ ಆರೋಪಿಗಳಿಗೆ ತಿಳಿಸಿದ್ದು ಅವರು ನಿವೇಶನವನ್ನು ಮಾರಾಟ ಮಾಡಿ 1 ನೇ ಆರೋಪಿ ಕೇಳಿದಷ್ಟು ಹಣ ಕೊಡುವಂತೆ ಇಲ್ಲದಿದ್ದರೆ ಚಾಸಾ 1 ರವರನ್ನು ವಾಪಸ್ಸು ಕರೆದುಕೊಂಡು ಹೋಗುವಂತೆ ಬೈದಿರುತ್ತಾರೆ ಎಂದು ತಿಳಿಸಿದ್ದು, ಸದರಿ ಸಮಯದಲ್ಲಿ ಪಂಚಾಯತಿ ಮಾಡಿದ್ದು ಪಂಚಾಯತಿಗೆ ಬೆಲೆ ಕೊಡದೆ ಜೀವ ಬೆದರಿಕೆ ಹಾಕಿದ್ದು ಹಿಂಸ ತಳಲಾರದ ಚಾಸಾ 1 ರವರು ಅವರ ತಂದೆ ತಾಯಿ ಮನೆಗೆ ಬಂದು ವಾಸವಾಗಿದ್ದರು ಎಂದು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.25 ಪ್ರಾಸಾ.7 ಕವಿತಾ ಇವರು ತಮ್ಮ ಸಾಕ್ಷ್ಯದಲ್ಲಿ ದಿ: 09.06.2019 ರಂದು ಚಾಸಾ1 ಮತ್ತು 1 ನೇ ಆರೋಪಿ ಮದುವೆ ಭದ್ರಾವತಿಯ ಮಲ್ಲೇಶ್ವರ ಸಮುದಾಯ ಭವನದಲ್ಲಿ ಆಗಿರುತ್ತದೆ ಮತ್ತು ಮದುವೆ ಸಮಯದಲ್ಲಿ ಚಾಸಾ1 ರವರಿಗೆ 150 ಗ್ರಾಂ ಮತ್ತು 1 ನೇ ಆರೋಪಿಗೆ 150 ಗ್ರಾಂ ಬಂಗಾರ ನೀಡಿ ಮದುವೆ ಮಾಡಿರುತ್ತೇವೆ ಮತ್ತು ಮದುವೆಯಾದ ನಂತರ ಚಾಸಾ 1 ರವರು 1 ನೇ ಆರೋಪಿ ಮನೆಯಲ್ಲಿ ಸುಮಾರು 15 ದಿನಗಳ ಕಾಲ ವಾಸ ಇದ್ದರು ಮತ್ತು ಸದರಿ ಸಮಯದಲ್ಲಿ ಹೆಚ್ಚಿನ ಹಣವನ್ನು ತರುವಂತೆ ಆರೋಪಿಗಳು ಚಾಸಾ1 ರವರಿಗೆ ಹಿಂಸೆ ನೀಡುತ್ತಿದ್ದರು ಮತ್ತು ನಂತರ ದಿ: 25.07.20 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಚಾಸಾ1 ರವರಿಗೆ 1 ನೇ ಆರೋಪಿ ಕೋಲಿನಲ್ಲಿ ಮತ್ತು ಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಮತ್ತು ನಂತರ ತಾವು ಗಲಾಟೆ ಬಿಡಿಸಿರುತ್ತೇವೆ ಮತ್ತು ಈ ಗಲಾಟೆ ಆಗುವ ಪೂರ್ವದಲ್ಲಿ ಬೆಂಗಳೂರಿನಲ್ಲಿ ಒಂದು ಬಾರಿ ದಿ: 29.12.19 ರಂದು 1 ನೇ ಆರೋಪಿ ಬೆಂಗಳೂರಿನಲ್ಲಿ ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾನೆ ಮತ್ತು ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದು ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.26ಃ ಪ್ರಾಸಾ.7 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಮದುವೆ ಸಮಯದಲ್ಲಿ ಆರೋಪಿಗಳ ಕೋರಿಕೆಯಂತೆ 3 ಲಕ್ಷ ಹಣ ಮತ್ತು 10 ತೋಲ ಬಂಗಾರವನ್ನು ವರದಕ್ಷಿಣೆಯಾಗಿ ನೀಡಿದ್ದರು ಮತ್ತು ಮದುವೆ ನಂತರ ಹೆಚ್ಚಿನ ವರದಕ್ಷಿಣೆ ತರುವಂತೆ ಆರೋಪಿಗಳು ಚಾಸಾ 1 ರವರಿಗೆ ದೈಹಿಕ ಮತ್ತು ಮಾನಸಿಕವಾಗಿ ಕಿರುಕುಳ ನೀಡಿರುತ್ತಾರೆ ಮತ್ತು ಗಲಾಟೆ ಆದ ಸಮಯದಲ್ಲಿ ಕೈಗಳಿಂದ 1 ನೇ ಆರೋಪಿ ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾರೆ ಮತ್ತು ಹೆಚ್ಚಿನ ವರದಕ್ಷಿಣೆ ತಂದರೆ ಮಾತ್ರ ಮನೆಗೆ ಬರುವಂತೆ ಇಲ್ಲದಿದ್ದರೆ ಸಾಯಿಸುವುದಾಗಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಮತ್ತು ಚಾಸಾ1 ರವರ ತಂದೆ ತಾಯಿಗಳಿಗೂ ಸಹ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.27ಃ ಪ್ರಾಸಾ.8 ಅಕ್ಷಯ್ ರವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿ: 09.06.2019 ರಂದು ಚಾಸಾ1 ಮತ್ತು 1 ನೇ ಆರೋಪಿ ಮದುವೆ ಭದ್ರಾವತಿಯ ಮಲ್ಲೇಶ್ವರ ಸಮುದಾಯ ಭವನದಲ್ಲಿ ಆಗಿರುತ್ತದೆ ಮತ್ತು ಮದುವೆ ಸಮಯದಲ್ಲಿ 10 ತೋಲ ಬಂಗಾರ ಮತ್ತು 3 ಲಕ್ಷ ರೂ. ಹಣವನ್ನು ವರದಕ್ಷಿಣೆಯಾಗಿ ನೀಡಿರುತ್ತಾರೆ ಮತ್ತು ಮದುವೆಯಾದ ನಂತರ ಚಾಸಾ.1 ರವರು 1 ನೇ ಆರೋಪಿ ಮನೆಯಲ್ಲಿ ಸ್ವಲ್ಪ ದಿನ ವಾಸ ಇದ್ದರು ಮತ್ತು ನಂತರ ಆಷಾಡಕ್ಕಾಗಿ ಅವರ ತವರು ಮನೆಗೆ ಬಂದಿದ್ದರು ಮತ್ತು 1 ನೇ ಆರೋಪಿ ಐಪಿಎಲ್ ಬೆಟ್ಟಿಂಗ್ ಆಟ ಆಡುವ ಅಭ್ಯಾಸ ಹೊಂದಿದ್ದರು ಮತ್ತು ಹಣದ ವಿಚಾರವಾಗಿ ಚಾಸಾ1 ಮತ್ತು 1 ನೇ ಆರೋಪಿ ನಡುವೆ ಗಲಾಟೆಗಳು ಆಗುತ್ತಿದ್ದು, ನಂತರ ಹೆಚ್ಚಿನ ವರದಕ್ಷಿಣೆ ಹಣ ನೀಡಿಲ್ಲ ಎಂದು ವಿವಾಹ ವಿಚ್ಛೇದನ ನೀಡುವುದಾಗಿ ಹಿಂಸೆ ನೀಡುತ್ತಿದ್ದರು ಮತ್ತು ದಿ 29.12.19 ರಂದು ಬೆಂಗಳೂರಿನಲ್ಲಿ ಚಾಸಾ 1 ರವರು 1 ನೇ ಆರೋಪಿಗಳು ಹಲ್ಲೆ ಮಾಡಿದ್ದರು ಮತ್ತು ದಿ: 25.07.20 ರಂದು ಸಂಜೆ 4.30 ರಿಂದ 5 ಗಂಟೆ ಸಮಯದಲ್ಲಿ ಚಾಸಾ1 ರವರಿಗೆ 1 ನೇ ಆರೋಪಿ ಕೈಗಳಿಂದ ಚಾಸಾ1 ರವರಿಗೆ ಹಣವನ್ನು ನೀಡುವಂತೆ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾನೆ ಮತ್ತು ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದು ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3
ಆರೋಪಿ 4

ಪ್ರಶ್ನೆ.28 ಪ್ರಾಸಾ.8 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಆರೋಪಿಗಳು ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಚಾಸಾ 1 ಮತ್ತು ಅವರ ತಂದೆ ತಾಯಿಗಳಿಗೆ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಮತ್ತು ಹೆಚ್ಚಿನ ಹಣವನ್ನು ತಂದರೆ ಮಾತ್ರ ಮನೆಗೆ ಬರುವಂತೆ ಬೆದರಿಕೆ ಹಾಕುತ್ತಿದ್ದರು ಮತ್ತು ಗಲಾಟೆ ಸಮಯದಲ್ಲಿ ತಾನು ಹಾಜರಿದ್ದು ಗಲಾಟೆ ಬಿಡಿಸಿರುತ್ತೇನೆ ಹಾಗೂ ಚಾಸಾ1 ರವರ ತಂದೆ ತಾಯಿಗೂ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.29 ಪ್ರಾಸಾ.9 ವಿಲ್ಸನ್ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ 30.08.2020 ರಂದು 10.30 ಗಂಟೆ ಸಮಯದಲ್ಲಿ ಲಕ್ಷ್ಮಣ ಮೂರ್ತಿ ಎಂಬುವವರ ಮನೆ ಬಳಿ ವರದಕ್ಷಿಣೆ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಿದ್ದು, ಸದರಿ ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.30: ಪ್ರಾಸಾ.10 ಅರುಣಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.08.2020 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಪಾರ್ವತಿರವರು ಮನೆ ಬಳಿ ಉಜ್ಜನಿಪುರದಲ್ಲಿ ಒಡವೆಗಳ ವಿಚಾರವಾಗಿ ಜಗಳವಾಗಿದ್ದು, ಪೊಲೀಸರು ಪಂಚನಾಮೆ ಮಾಡಿದ್ದು, ಸದರಿ ಸಮಯದಲ್ಲಿ ಸಹಿ ಮಾಡಿರುತ್ತೇನೆ ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2

ಆರೋಪಿ 3
ಆರೋಪಿ 4

ಪ್ರಶ್ನೆ.31 ಪ್ರಾಸಾ.11 ಲಕ್ಷ್ಮಣಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 09.06.2020 ರಂದು ತನ್ನ ಮಗಳ ಮದುವೆ 1 ನೇ ಆರೋಪಿಯೊಂದಿಗೆ ಜನ್ನಾಪುರದ ಮಲ್ಲೇಶ್ವರ ಸಮುದಾಯ ಭವನದಲ್ಲಿ ಆಗಿರುತ್ತದೆ ಮತ್ತು ಮದುವೆಯ ಸಮಯದಲ್ಲಿ 3 ಲಕ್ಷ ರೂ. ಹಣ ಮತ್ತು ಬಂಗಾರದ ಒಡವೆಗಳನ್ನು ವರದಕ್ಷಿಣೆಯಾಗಿ ಆರೋಪಿಗಳು ಪಡೆದಿದ್ದರು ಮತ್ತು ಮದುವೆಯಾದ ನಂತರ ಚಾಸಾ1 ರವರು 1 ನೇ ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ವಾಸ ಇದ್ದರು ಮತ್ತು ನಂತರ ಆರೋಪಿಗಳು ವರದಕ್ಷಿಣೆ ವಿಚಾರವಾಗಿ ಚಾಸಾ1 ರವರಿಗೆ ಕಿರುಕುಳ ನೀಡುತ್ತಿದ್ದರು ಮತ್ತು ಚಾಸಾ1 ರವರು ಸದರಿ ವಿಚಾರವನ್ನು ಫೋನ್ ಮಾಡಿ ನಮಗೆ ತಿಳಿಸುತ್ತಿದ್ದರು ಮತ್ತು ನಂತರ ತಾನು ಸದರಿ ವಿಚಾರವನ್ನು ತನ್ನ ಮಗನಿಗೆ ತಿಳಿಸಿದ್ದು, ಆತ ಚಾಸಾ1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಮತ್ತು ತನ್ನ ಮಗಳಿಗೆ ಆರೋಪಿ ಹಲ್ಲೆ ಮಾಡಿದ ಕಾರಣ ಅವಳಿಗೆ ಕಿವಿ ಕೇಳಿಸುತ್ತಿರಲಿಲ್ಲ ಮತ್ತು ನಂತರ ತಾವು 1 ವರೆ ಲಕ್ಷ ರೂ. ಹಣವನ್ನು ಹೆಚ್ಚುವರಿ ವರದಕ್ಷಿಣೆಯಾಗಿ ಆರೋಪಿಗಳಿಗೆ ನೀಡಿರುತ್ತೇವೆ ಮತ್ತು ಹಣವನ್ನು ತಾವು 4 ನೇ ಆರೋಪಿ ಖಾತೆಗೆ ಹಾಕಿರುತ್ತೇವೆ ಮತ್ತು ನಂತರ ಆರೋಪಿಗಳು ತಮ್ಮ ಮನೆ ಬಳಿ ಬಂದು ಚಾಸಾ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು 1 ನೇ ಆರೋಪಿ ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿದ್ದು, ಇದಕ್ಕೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.32: ಪ್ರಾಸಾ.11 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ** ಆರೋಪಿಗಳ ಬೇಡಿಕೆಯಂತೆ ತಾವು 10 ತೋಲ ಬಂಗಾರ ಮತ್ತು 3 ಲಕ್ಷ ರೂ. ವರದಕ್ಷಿಣೆ ನೀಡಿ ಮದುವೆ ಮಾಡಿಕೊಟ್ಟಿರುತ್ತೇವೆ ಮತ್ತು ಮದುವೆಯಾದ ನಂತರ ಆರೋಪಿಗಳೊಂದಿಗೆ ಚಾಸಾ1 ಕೆ.ದಾಸಪುರ ಗ್ರಾಮದಲ್ಲಿ ವಾಸ ಇದ್ದು ನಂತರ ಬೆಂಗಳೂರಿನ ನಾಗರಬಾವಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದರು ಮತ್ತು ಆಷಾಡ ಮಾಸದಲ್ಲಿ ಚಾಸಾ1 ರವರು ತಮ್ಮ ಮನೆಗೆ ಬಂದಿದ್ದಾಗ 1 ನೇ ಆರೋಪಿ ಚಾಸಾ1 ರವರ ಒಡವೆಗಳನ್ನು ಅಡಮಾನ ಮಾಡಿ ಐಪಿಎಲ್ ಬೆಟ್ಟಿಂಗ್ ಮತ್ತು ಇತರ ದುಶ್ಚಟಗಳಿಗೆ ಬಳಸಿಕೊಂಡು ಸಾಲ ಮಾಡಿಕೊಂಡಿದ್ದರು ಮತ್ತು ಚಾಸಾ1 ರವರು ಸದರಿ ವಿಚಾರವನ್ನು ಕೇಳಿದಾಗ ಅವರೊಂದಿಗೆ ಗಲಾಟೆ ಮಾಡಿ ಹೆಚ್ಚಿನ ವರದಕ್ಷಿಣೆ ತರುವಂತೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದರು

ಮತ್ತು ಈ ವಿಚಾರವಾಗಿ 2 ರಿಂದ 4 ನೇ ಆರೋಪಿಗಳಿಗೆ ತಿಳಿಸಿದ್ದು, ಅವರು ತಮ್ಮ ನಿವೇಶನವನ್ನು ಮಾರಾಟ ಮಾಡಿ ಹೆಚ್ಚಿನ ವರದಕ್ಷಿಣೆ ತರುವಂತೆ ತಿಳಿಸಿದ್ದು ಮತ್ತು ಚಾಸಾ1 ರವರಿಗೆ ಕೆಲಸ ಮಾಡಲು ಬರುವುದಿಲ್ಲ ಎಂದು ತಮ್ಮ ಮಗನಿಗೆ ಶ್ರೀಮಂತ ಹುಡುಗಿಯನ್ನು ತಂದು ಮದುವೆ ಮಾಡುವುದಾಗಿ ಕಿರುಕುಳ ನೀಡಿದ್ದು ಮತ್ತು 29.11.2019 ರಂದು, 1 ನೇ ಆರೋಪಿ ಚಾಸಾ1 ರವರಿಗೆ ಎಡಭಾಗದ ಕೆನ್ನೆಗೆ ಹೊಡೆದು ಗಾಯಪಡಿಸಿದ್ದು ಮತ್ತು ಸದರಿ ವಿಚಾರವನ್ನು ಚಾಸಾ1 ರವರು ನಮಗೆ ಫೋನ್ ಮೂಲಕ ತಿಳಿಸಿದ್ದು ಮತ್ತು ಈ ವಿಚಾರವಾಗಿ ದೊಡ್ಡನಾಳು ಗ್ರಾಮದಲ್ಲಿ ಹಿರಿಯರ ಸಮಕ್ಷಮ ಪಂಚಾಯತಿ ಮಾಡಿದ್ದು ಮತ್ತು ಪಂಚಾಯತಿಗೆ ಆರೋಪಿಗಳು ಬೆಲೆ ಕೊಡದೆ ಹೋಗಿದ್ದು ಮತ್ತು ಚಾಸಾ1 ದಿಃ 25.07.2020 ರಂದು ಸಂಜೆ ಸುಮಾರು 4.30 ಗಂಟೆ ಸಮಯದಲ್ಲಿ ತಮ್ಮ ಮನೆಯಲ್ಲಿದ್ದಾಗ 1 ನೇ ಆರೋಪಿ ಅಲ್ಲಿಗೆ ಬಂದು ಚಾಸಾ1 ರವರಿಗೆ ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಚಾಸಾ1 ರವರಿಗೆ ಹಲ್ಲೆ ಮಾಡಿ ಹೆದರಿಸಿ ಹೋಗಿದ್ದು ಮತ್ತು ತಾವು ಸದರಿ ಜಗಳವನ್ನು ಬಿಡಿಸಿದ್ದು ಮತ್ತು ಚಾಸಾ1 ರವರು ಪೊಲೀಸರಿಗೆ ದೂರು ನೀಡಿದ್ದು ಮತ್ತು ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದು ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.33ಃ ಪ್ರಾಸಾ.12 ರಾಮಣ್ಣ ಇವರು ತಮ್ಮ ಸಾಕ್ಷ್ಯದಲ್ಲಿ, ನಿಪಿ5 ಕ್ಕೆ ತಾನು ದಿಃ 08.09.2020 ರಂದು ಬೆಂಗಳೂರಿನಲ್ಲಿ ಪೊಲೀಸರು ಪಂಚನಾಮೆಗೆ ಬಂದಿದ್ದಾಗ ಸಹಿ ಮಾಡಿರುತ್ತೇನೆ ಮತ್ತು ತನ್ನೊಂದಿಗೆ ಚಾಸಾ18 ಸಹಿ ಮಾಡಿರುತ್ತಾರೆ ಮತ್ತು ಪಂಚನಾಮೆಯನ್ನು ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ಬರೆದಿರುತ್ತಾರೆ ಮತ್ತು ಸದರಿ ಸಮಯದಲ್ಲಿ ನಿಪಿ.6 ಮತ್ತು 7 ರ ಪ್ರಕಾರ ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.34ಃ ಪ್ರಾಸಾ.13 ನಾಗರಾಜು ಇವರು ತಮ್ಮ ಸಾಕ್ಷ್ಯದಲ್ಲಿ, ದಿ: 21.09.2020 ರಂದು ತಾನು ಬೈಕಿಗೆ ಪೆಟ್ರೋಲ್ ಹಾಕಿಸಲು ಭದ್ರಾವತಿ ಗ್ರಾಮಾಂತರ ಪೊಲಿಸ್ ಠಾಣೆ ಮಾರ್ಗವಾಗಿ ಹೋಗುತ್ತಿದ್ದಾಗ ಸದರಿ ಠಾಣೆಯ ಮುಂಭಾಗದಲ್ಲಿರುವ ಅಂಗಡಿಯಲ್ಲಿ ತನ್ನ ಪರಿಚಯಸ್ಥರಾದ ಚಾಸಾ 20 ಚಹಾ ಕುಡಿಯುತ್ತಿದ್ದು, ತಾನು ಚಾಸಾ 20 ರವರನ್ನು ಮಾತನಾಡಿಸಲು ಹೋಗಿದ್ದು, ತಾವಿಬ್ಬರು ಅಂಗಡಿಯ ಬಳಿ ಚಹಾ ಕುಡಿಯುತ್ತಾ ಮಾತಾನಾಡುತ್ತಿದ್ದಾಗ ಪಕ್ಕದಲ್ಲೇ ಇದ್ದ ಠಾಣೆಯಿಂದ ಇಬ್ಬರು ಪೊಲೀಸರು ಬಂದು ಅವರ ಜೊತೆ ಬರುವಂತೆ ಹೇಳಿದರು ಮತ್ತು ಸಾಕ್ಷಿಯಾಗಿ ಸಹಿ ಮಾಡುವಂತೆ ಪೊಲೀಸರು ಕರೆದರು ಮತ್ತು ತಾನು ಮತ್ತು ಚಾಸಾ 20 ಠಾಣೆಗೆ ಹೋದಾಗ ತನ್ನ ಪರಿಚಯಸ್ಥರಾದ ಚಾಸಾ 3 ಮತ್ತು ಆಕೆಯ ಮಗಳಾದ ಚಾಸಾ 1 ಠಾಣೆಯಲ್ಲಿದ್ದರು ಮತ್ತು ಸದರಿಯವರು ಠಾಣೆಯಲ್ಲಿ ಇರುವು ಕಾರಣವನ್ನು ತಾನು ವಿಚಾರಿಸಿದಾಗ, ಚಾಸಾ 3 ರವರು ಮಗಳ ವೈವಾಹಿಕ ಸಂಬಂಧದಲ್ಲಿ ಸಮಸ್ಯೆಯಾಗಿದೆ ಸಾಕ್ಷಿಯಾಗಿ ನೀವು ಸಹಿ ಮಾಡಿ ಎಂದು ಕೇಳಿಕೊಂಡರು ಮತ್ತು ನಂತರ ಚಾಸಾ 1 ರವರ ವೈವಾಹಿಕ ಸಂಬಂಧದ ಪ್ರಕರಣಕ್ಕೆ ಸಂಬಂಧಪಟ್ಟ ಸದರಿಯವರು ಹಾಜರುಪಡಿಸಿದ್ದ ಲಗ್ನ ಪತ್ರಿಕೆ, ಮದುವೆ ಫೋಟೋಗಳು, ಹಣ ಪಾವತಿ ರಶೀದಿಗಳು ಹಾಗೂ ಬ್ಯಾಂಕ್ ದಾಖಲೆಗಳನ್ನು ಪೊಲೀಸರು ವಶಕ್ಕೆ ಪಡೆದರು ಮತ್ತು ಆ ಸಂದರ್ಭದಲ್ಲಿ ಪೊಲೀಸರು ನಿಪಿ.8 ರ ದಾಖಲೆ ಬರೆದು ತನ್ನ ಮತ್ತು ಚಾಸಾ 20 ರವರ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.35ಃ ಪ್ರಾಸಾ.14 ಮಂಜುನಾಥ, ಪಿಐ, ಇವರು ತಮ್ಮ ಸಾಕ್ಷ್ಯದಲ್ಲಿ, ದಿ.31.08.2020 ರಂದು ಈ ಪ್ರಕರಣದ ಕಡತವನ್ನು ಚಾಸಾ- 24 ರವರಿಂದ ಪಡೆದುಕೊಂಡು ಅದೇ ದಿನ ಉಜ್ಜಿನಿಪುರದಲ್ಲಿರುವ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಫಿರ್ಯಾದಿ ತೋರಿಸಿದಂತೆ ಚಾಸಾ-15 ಮತ್ತು 16 ರವರ ಸಮಕ್ಷಮ ನಿಪಿ.2 ರವಂತೆ ಪಂಚನಾಮೆ ಜರುಗಿಸಿದ್ದು ಹಾಗೂ ನಿಪಿ.28 ರಂತೆ ಕಚ್ಚಾ ನಕಾಶೆ ಬರೆದು ನಿಪಿ.3 ಮತ್ತು 4 ರಂತೆ ಫೋಟೋ ಪಡೆದಿರುತ್ತೇನೆ ಮತ್ತು ಅದೇ ದಿನ ಚಾಸಾ 2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3
ಆರೋಪಿ 4

ಪ್ರಶ್ನೆ:36ಃ ಪ್ರಾಸಾ.14 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿ 07.09.2020 ರಂದು ಚಾಸಾ-24 ರವರಿಗೆ ಈ ಪ್ರಕರಣದ ಕೃತ್ಯ ನಡೆದ ಬೆಂಗಳೂರಿನಲ್ಲಿರುವ ಮನೆಯ ಪಂಚನಾಮೆ ಜರುಗಿಸಿ ವರದಿ ಮಾಡಲು ನಿಪಿ.29 ರಂತೆ ಮೆಮೊ ಕೊಟ್ಟಿದ್ದು ಅದರಂತೆ ಸದರಿಯವರು ದೀ 11.09.2020 ರಂದು ವರದಿಯೊಂದಿಗೆ ಪಂಚನಾಮೆ, ಕಚ್ಚಾ ನಕಾಶೆ ಮತ್ತು ಫೋಟೋಗಳನ್ನು ಹಾಜರುಪಡಿಸಿರುತ್ತಾರೆ ಮತ್ತು ದಿ 21.09.2020 ರಂದು ಚಾಸಾ. 1 ರವರು ಠಾಣೆಗೆ ಹಾಜರಾಗಿ ತಮ್ಮ ಮದುವೆಗೆ ಸಂಬಂಧಪಟ್ಟ ಆಮಂತ್ರಣ ಪತ್ರಿಕೆ, ಫೋಟೋಗಳು ಮತ್ತು ಒಡವೆ ಖರೀದಿ ರಶೀದಿ ಮತ್ತು ಹಣ ವರ್ಗಾವಣೆ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಚಾಸಾ- 19 ಮತ್ತು 20 ರವರ ಸಮಕ್ಷಮ ಮ.12 ರಿಂದ 01.30 ರವರೆಗೆ ಜಪ್ತು ಮಾಡಿ ನಿಪಿ.5 ರಂತೆ ಪಂಚನಾಮೆ ಜರುಗಿಸಿ, ಫೋಟೋ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.37ಃ ಪ್ರಾಸಾ.14 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿ 05.10.2020 ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಖುದ್ದಾಗಿ ಠಾಣೆಗೆ ಹಾಜರಾದ ಮೇರೆಗೆ ಅವರನ್ನು ದಸ್ತಗಿರಿ ಮಾಡಿ ಕ್ರಮ ಅನುಸರಿಸಿ ನಂತರ ಬಿಡುಗಡೆ ಮಾಡಿರುತ್ತೇನೆ ಮತ್ತು ದಿ: 08.10.2020 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ- 22 ರವರಿಂದ ನಿಪಿ.30 ರಂತೆ ಪಡೆದಿರುತ್ತೇನೆ ಮತ್ತು ದಿ: 27.10.2020 ರಂದು ಚಾಸಾ- 14 ರವರಿಂದ ಪಿರ್ಯಾದಿ ಮತ್ತು 1 ನೇ ಆರೋಪಿಯ ಮದುವೆಗೆ ಸಂಬಂಧಪಟ್ಟ ದಾಖಲೆಯನ್ನು ನಿಪಿ.31 ಮತ್ತು 32 ರಂತೆ ಪಡೆದಿರುತ್ತೇನೆ ಮತ್ತು ದಿ:25.04.2021 ರಂದು ತನಿಖೆ ಸಂದರ್ಭದಲ್ಲಿ ಪಡೆದ ಫೋಟೋಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿರುತ್ತೇನೆ ಮತ್ತು ದಿ: 10.08.2021 ರಂದು ಪಿರ್ಯಾದಿಯ ಮರುಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಮತ್ತು ತನಿಖೆ ಕಾಲಕ್ಕೆ ಚಾಸಾ-1 ರವರ ಪೋಷಕರು ಬೆಂಗಳೂರಿನ ಆಸ್ತಿ ಮಾರಾಟ ಮಾಡಿದ ದಾಖಲೆಯನ್ನು ನಿಪಿ.34 ರಂತೆ ಪಡೆದಿರುತ್ತೇನೆ ಮತ್ತು ಅದೇ ದಿನ ಪ್ರಕರಣದ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಅಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.38ಃ ಪ್ರಾಸಾ.15 ಸಿ.ಕೆ. ಮಹೇಶ್ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ 30.08.2021 ರಂದು ಬೆ..11-30 ತಾನು ಠಾಣಾ ಪ್ರಭಾರದಲ್ಲಿದ್ದಾಗ ಠಾಣೆಗೆ ಬಂದ ಈ ಪ್ರಕರಣದ ಪಿರ್ಯಾದಿ ಚಾಸಾ-1 ರವರು ಕೊಟ್ಟ ಟೈಪ್ ಮಾರಿದ ದೂರನ್ನು ನಿಪಿ.1 ರಂತೆ ಸ್ವೀಕರಿಸಿ ಸದರಿ ದೂರಿನ ಆಧಾರದ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 113/2020 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ ಮತ್ತು ನಿಪಿ-1 ರ ದೂರಿನ ಆಧಾರದ ಮೇರೆಗೆ ತಾನು ದಾಖಲಿಸಿಕೊಂಡಿದ್ದ ಪ್ರ.ವ.ವರದಿಯನ್ನು ನಿಪಿ-36 ಎಂದು ಗುರುತಿಸಿರುತ್ತಾರೆ ಮತ್ತು ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-27 ರವರಿಗೆ ವರ್ಗಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?
ಉತ್ತರಃ
ಆರೋಪಿ 1
ಆರೋಪಿ 2
ಆರೋಪಿ 3
ಆರೋಪಿ 4

ಪ್ರಶ್ನೆ.39ಃ ಪ್ರಾಸಾ.15 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 07.09.2021 ರಂದು ಚಾಸಾ-27 ರವರು ಬೆಂಗಳೂರಿನ ಜ್ಞಾನಗಂಗಾ ನಗರದಲ್ಲಿರುವ ಕೃತ್ಯ ನಡೆದ ಸ್ಥಳ ಪಂಚನಾಮೆ ಜರುಗಿಸುವಂತೆ ಮೆಮೊ ಕೊಟ್ಟಿದ್ದು ಅದರಂತೆ ಅದೇ ದಿನ ರಾತ್ರಿ ಭದ್ರಾವತಿಯಿಂದ ಹೊರಟು ಮರುದಿನ ಬೆಂಗಳೂರಿಗೆ ತಲುಪಿರುತ್ತೇನೆ ಮತ್ತು ದಿಃ 08.09.2021 ರಂದು ಮಧ್ಯಾಹ್ನ 03-00 ರಿಂದ 04-00 ಸಮಯದಲ್ಲಿ ಬೆಂಗಳೂರಿನಲ್ಲಿ ಮಲ್ಲತಿಹಳ್ಳಿ ಜ್ಞಾಗಂಗಾ ನಗರದ ಹತ್ತಿರ ಇರುವ ಚಾಸಾ-13 ರವರಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ಇದ್ದ ಬಗ್ಗೆ ಚಾಸಾ-1 ರವರು ತೋರಿಸಿದ ಮೇರಗೆ ಚಾಸಾ- 17 ಮತುತ 18 ರವರು ಸಮಕ್ಷಮ ನಿಪಿ.5 ರಂತೆ ಪಂಚನಾಮೆ ಬರೆದು ನಿಪಿ.6 ಮತ್ತು 7 ರಂತೆ ಫೋಟೋ ಪಡೆದಿರುತ್ತೇನೆ ಮತ್ತು ಆ ಸಂದರ್ಭದಲ್ಲಿ ಬರೆಯಲಾದ ಕಚ್ಚಾ ನಕಾಶೆಯನ್ನು ನಿಪಿ-37 ಎಂದು ಗುರುತಿಸಿ ಮತ್ತು ದಿಃ10.09.2021 ರಂದು ಭದ್ರಾವತಿಗೆ ವಾಪಸು ಬಂದು ಮರುದಿನ ಅಂದರೆ ದಿಃ 11.09.2021 ರಂದು ನಿಪಿ 5 ರಿಂದ 7 ಮತ್ತು 37 ರ ದಾಖಲೆಯನ್ನು ವರದಿ ಸಮೇತ

ಚಾಸಾ- 27 ರವರಿಗೆ ಒಪ್ಪಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.40ಃ ಪ್ರಾಸಾ.18 ಜಯಪ್ಪ ರವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ 03.09.2020 ರಂದು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಚಾಸಾ-1 ಮತ್ತು 1 ನೇ ಆರೋಪಿ ವಾಸವಿದ್ದ ಬಾಡಿಗೆ ಮನೆಯಲ್ಲಿ ಅವರಿಬ್ಬರ ನಡುವೆ ಗಲಾಟೆಯಾಗಿದ್ದ ಸಂಬಂಧ ಪೊಲೀಸರು ಬಂದು ಮಹಜರ್ ಮಾಡಿ ನಿ.ಪಿ.5 ರ ದಾಖಲೆಯನ್ನು ಬರೆದು ತನ್ನ ಸಹಿ ಪಡೆದರು ಮತ್ತು ನಿ.ಪಿ.6 ಮತ್ತು 7 ರಂತೆ ಫೋಟೋಗಳನ್ನು ಪಡೆದುಕೊಂಡರು ಮತ್ತು ಈ ಪ್ರಕರಣದ ಸಂಬಂಧ ಪೊಲೀಸರು ತನ್ನ ಹೇಳಿಕೆ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.41ಃ ಪ್ರಾಸಾ.18 ರವರು **ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟಿ ಸವಾಲಿನ ಸಾಕ್ಷ್ಯದಲ್ಲಿ,** ದಿನಾಂಕ 08.09.2020 ರಂದು ಚಾಸಾ-1 ಮತ್ತು 1 ನೇ ಆರೋಪಿ ವಾಸವಿದ್ದ ಹಾಗೂ ಬೆಂಗಳೂರಿನ ಮಾಲತ್ ಹಳ್ಳಿ ಜ್ಞಾನಗಂಗಾ ನಗರದಲ್ಲಿರುವ ಚಾಸಾ-13 ರವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ಪೊಲೀಸರು ನಿ.ಪಿ.-5 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಮತ್ತು ಚಾಸಾ-1 ರವರ ಚಿಕ್ಕಪ್ಪ ಚಾಸಾ-5 ರವರ ಮೂಲಕ ತನಗೆ 1 ನೇ ಆರೋಪಿಗೆ ಚಾಸಾ-1 ರವರ ತಂದೆ-ತಾಯಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿರುವ ವಿಚಾರ ಗೊತ್ತಾಯಿತು ಮತ್ತು ಚಾಸಾ- 1 ಮತ್ತು ಅವರ ಗಂಡನ ನಡುವೆ ವೈಮನಸು ಉಂಟಾಗಿದ್ದ ಸಂಬಂಧ ದಿಃ 15.02.2021 ರಂದು ತಾನು ಮತ್ತು ಇತರರು ಚನ್ನರಾಯ ಪಟ್ಟಣ್ಣದ ದೊಡ್ಡ ಎರಗನಾಳ್ ಗ್ರಾಮದಲ್ಲಿ ಪಂಚಾಯತಿ ಮಾಡಿದ್ದೆವು ಮತ್ತು ಸದರಿ ಪಂಚಾಯತಿಯಲ್ಲಿ ಆರೋಪಿತರು ಚಾಸಾ-1 ರವರಿಗೆ ವರದಕ್ಷಿಣೆ ಸಲುವಾಗಿ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುವ ವಿಚಾರ ಗೊತ್ತಾಯಿತು ಮತ್ತು ಪಂಚಾಯತಿಯಲ್ಲಿ ಆರೋಪಿತರು ಹೆಚ್ಚಿನ

ವರದಕ್ಷಿಣೆ ತಂದರೆ ಮಾತ್ರ ಚಾಸಾ-1 ರವರನ್ನು ಮನೆಗೆ ಸೇರಿಸುವುದಾಗಿ ಹೇಳಿದ್ದರು ಹಾಗೂ ಮೇಲ್ಕಂಡ ಎಲ್ಲಾ ವಿಚಾರಗಳನ್ನು ದಿನಾಂಕ 21.09.2020 ರಂದು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.42ಃ ಪ್ರಾಸಾ.19 ಡಾ|| ಚಿದಾನಂದ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ 24.08.2020 ರಂದು ಬೆಳಗ್ಗೆ 11-45 ಗಂಟೆ ಸುಮಾರಿಗೆ ತಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಹಲ್ಲೆ ಪ್ರಕರಣದಲ್ಲಿ ಗಾಯಗೊಂಡಿದ್ದ ಧನಲಕ್ಷ್ಮಿ ಬಿನ್ ಲಕ್ಷ್ಮಣ ಎಂಬುವವರು ತಮ್ಮ ಆಸ್ಪತ್ರೆಗೆ ಬಂದಿದ್ದರು ಮತು ಸದರಿ ಗಾಯಳು ದಿನಾಂಕ 25.07.2020 ರಂದು ತನ್ನ ಗಂಡ ಎಡ ಕೆನ್ನೆ ಮೇಲೆ ಹೊಡೆದಿದ್ದ ಎಂದು ತನ್ನ ಮುಂದೆ ತಿಳಿಸಿರುತ್ತಾರೆ ಮತ್ತು ಸದರಿ ಗಾಯಳು ತನ್ನ ಎಡಕಿವಿಯಲ್ಲಿ ನೋವು ಇದೆ, ಸರಿಯಾಗಿ ಕೇಳಿಸುತ್ತಿಲ್ಲ ಎಂದು ಹೇಳಿದರು ಮತ್ತು ಗಾಯಳುವಿನ ದೇಹದ ಮೇಲೆ ಬರಿಗಣ್ಣಿಗೆ ಕಾಣುವಂತೆ ಯಾವುದೇ ಗಾಯ ಆಗಿರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆ.43ಃ ಪ್ರಾಸಾ.19 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಗಾಯಳುವನ್ನು ತಮ್ಮ ಆಸ್ಪತ್ರೆಯ ಕಿವಿ, ಮೂಗು ಮತ್ತು ಗಂಟಲು ವಿಭಾಗದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವಂತೆ ಹೇಳಲಾಯಿತು ಮತ್ತು ಅದರಂತೆ ಆಕೆ ಚಿಕಿತ್ಸೆ ಪಡೆದು ತನ್ನ ಮುಂದೆ ವರದಿ ಹಾಜರುಪಡಿಸಿದ್ದು, ಆಕೆಯ ಕಿವಿಗೆ ಯಾವುದೇ ರೀತಿಯ ಗಾಯ ಅಥವಾ ಇತರೆ ತೊಂದರೆ ಆಗಿಲ್ಲ ಎನ್ನುವುದು ಕಂಡು ಬಂದಿರುತ್ತದೆ ಮತ್ತು ಎಡ ಕಿವಿಯಲ್ಲಿ ಸ್ವಲ್ಪ ಮುಟ್ಟಿನ ಶ್ರವಣ ದೋಷ ಇದೆ ಎಂದು ಗೊತ್ತಾಗಿರುತ್ತದೆ ಮತ್ತು ಸದರಿ ಶ್ರವಣ ದೋಷ ಕಿವಿ ಮೇಲೆ ಬಲವಾಗಿ ಕೈಯಿಂದ ಹೊಡೆದಾಗ ಉಂಟಾಗಿರುವ ಸಾಧ್ಯತೆ ಇರುತ್ತದೆ ಮತ್ತು ಸದರಿ ದೋಷವೂ ಸಾಮನ್ಯ ಸ್ವರೂಪದಾಗಿರುತ್ತದೆ ಮತ್ತು ಗಾಯಳು ಧನಲಕ್ಷ್ಮಿಯನ್ನು ಪರೀಕ್ಷೆ ಮಾಡಿ, ಕಿವಿ, ಮೂಗು ಮತ್ತು ಗಂಟಲು ತಜ್ಞರಿಂದ

ಪಡೆದ ವರದಿಯ ಆಧಾರದ ಮೇಲೆ ಪೊಲೀಸರಿಗೆ ನಿಪಿ.30 ರಂತೆ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮ್ಮ ಉತ್ತರವೇನು?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆಃ 44- - ನೀವು ಈ ಪ್ರಕರಣದ ಬಗ್ಗೆ ಬೇರೆ ಏನಾದರೂ ಹೇಳಲು ಬಯಸುತ್ತೀರಾ ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಪ್ರಶ್ನೆಃ45- ನಿಮ್ಮ ಪರವಾಗಿ ಸಾಕ್ಷ್ಯ ಮಾಡಿಸುವಿರಾ?

ಉತ್ತರಃ

ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

(ಈ ಮೇಲ್ಕಂಡ ಸಾಕ್ಷಿದಾರರ ಹೇಳಿಕೆಯನ್ನು ಆರೋಪಿಗಳಿಗೆ ತಿಳಿಯುವ ಹಾಗೇ ಓದಿ ಹೇಳಿ ಅವರಿಂದ ಬಂದ ಉತ್ತರವನ್ನು ಸಂಪೂರ್ಣವಾಗಿ ದಾಖಲಿಸಿರುತ್ತೇನೆ ಎಂದು ಈ ಮೂಲಕ ದೃಡಿಕರಿಸಿರುತ್ತೇನೆ)

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ..ದಂ.ಗಳು, ಭದ್ರಾವತಿ.

ಸ್ಥಳಃ ಭದ್ರಾವತಿ

ದಿನಾಂಕಃ 10.06.2025